# ಅಜ್ಜಿಯ ತೋಟ

■ ಚಂದನ ಜಿ. ಪಿ., ಹೊನ್ನಾಳಿ

ಅಜ್ಜಿಯ ಹೂತೋಟವು ನೋಡಲು ಚೆನ್ನ
ಗೋಡೆಗೆ ಹಬ್ಬಿದ ಮಲ್ಲಿಗೆ ಬಳ್ಳಿಯ ಹಬ್ಬ
ಸಂಡಿಗೆ ಇಟ್ಟಂತಿಹ ನಂದಿಬಟ್ಟಲು ಹೂವ
ನನಗೂ ಎತ್ತರ ಬೆಳೆದ ಕೆಂಪು ದಾಸವಾಳ
ದೇವರ ಪೂಜೆಗೆ ಕಾದಿವೆ ಕಣಗಲು ಹೂವ
ಹೆಜ್ಜೆ ಹೆಜ್ಜೆಗೂ ಗುಲಾಬಿಯ ಘಮ ಘಮ

ಅಮ್ಮನ ಸಾರಿಗೆ ತಾಜಾ ಕೊತ್ತುಂಬರಿ ಸೊಪ್ಪು
ಅಪ್ಪನ ನೆಚ್ಚಿನ ಪೇರಳೆ ಸೀತಾಫಲ ಹಣ್ಣು
ಅಜ್ಜಿಯ ಬಿಳಿ ಕೂದಲಿಗೆ ಮದರಂಗಿಯ ಬಣ್ಣ
ತಾತನ ಶೀತಕೆ ಹಿತ್ತಲ ಶುಂಠಿ ಕಷಾಯ
ಅಜ್ಜಿಯ ತೋಟದಿ ಸಮಯ ಕಳೆವುದೇ ಚೆನ್ನ ■







# ಚುಕ್ಕಿಮರಿ

■ ಡಾ. ಕೆ.ಬಿ. ರಂಗಸ್ವಾಮಿ

ಚುಕ್ಕಿಮರಿಯು ಕಾಲು ಜಾರಿ
ಬುವಿಯ ಮೇಲೆ ಬಿದ್ದಿತು
ಪಿಳಿಪಿಳಿ ಕಣ್ಣು ಬಿಡುತ
ಅತ್ತ ಇತ್ತ ನೋಡಿತು

ತನ್ನವರಾರೂ ಕಾಣದಾಗಿ
ಭಯದಿಂದ ನಡುಗಿತು
ಅಮ್ಮನನ್ನು ನೆನೆಸಿಕೊಂಡು
ಬಿಕ್ಕಿ ಬಿಕ್ಕಿ ಅತ್ತಿತು

ಆಟವಾಡುತ್ತಿದ್ದ ಪುಟ್ಟ
ಅಳುವ ಚುಕ್ಕಿ ಕಂಡನು
ಫಳ ಫಳ ಹೊಳೆವ ಅದನು
ಮೆಲ್ಲನೆತ್ತಿಕೊಂಡನು

ಮನುಜರಂತೆ ಚುಕ್ಕಿಮರಿಯು
ಮೆಲ್ಲನುಲಿಯತೊಡಗಿತು
ಬಾನಿನಿಂದ ಕಾಲುಜಾರಿ
ಬಿದ್ದ ಕಥೆಯ ಅರುಹಿತು

ಮರುಕಪಟ್ಟು ಪುಟ್ಟ ಅದನು
ಅಣ್ಣನಂತೆ ಸಂತೈಸಿದನು
ಮುದ್ದುಗರೆದು ಲಲ್ಲೆಮಾಡಿ
ಅಳಬೇಡ ಚಿನ್ನ ಎಂದನು

ಮೇಲಕೆತ್ತಿ ಗಾಳಿಯಲ್ಲಿ
ಮೆಲ್ಲನೆ ತೇಲಿಬಿಟ್ಟನು
ಶುಭ ಕೋರಿ ಚುಕ್ಕಿಮರಿಗೆ
ವಿದಾಯ ಹೇಳಿದನು

ಮೆಲ್ಲ ಮೆಲ್ಲ ಚುಕ್ಕಿಮರಿಯು
ಬಾನಿನತ್ತ ಹಾರಿತು
ತನ್ನ ಬಳಗ ಸೇರಿಕೊಂಡು
ನಡೆದ ಕಥೆಯ ಹೇಳಿತು

ಚುಕ್ಕಿಗಳು ಪುಟ್ಟನನ್ನು
ಮನದಲ್ಲೇ ನೆನೆದವು
ನೂರ್ಕಾಲ ಬಾಳುವಂತೆ
ವರವನಿತ್ತು ಹರಸಿದವು. ■